ಸತ್ತವರನ್ನು ಅವಲಂಬಿಸಿಕೊಂಡಿರುವವರಿಗೆ ದಿನಾಂಕ ೨೦-೩-೧೯೮೮ ರಲ್ಲಿ ಮೋಟಾರ್ ವಾಹನ ಕಾಯಿದೆ ಕಲಂ ೧೧೦ರ ಪ್ರಕಾರ ಪರಿಹಾರವನ್ನು ಪಡೆಯಲು ತಿಳಿಸಲಾಗಿದೆ. ಅದೇ ರೀತಿ ದಿನಾಂಕ ೫-೫-೧೯೮೮ ರಂದು ಗಾಯಗೊಂಡವರಿಗೂ ಸಹ ಅಂತಹುದೇ ನೋಟೀಸನ್ನು ಜಾರಿ ಮಾಡಿ ಪರಿಹಾರವನ್ನು ಪಡೆಯಲು ತಿಳಿಸಲಾಗಿದೆ. ಮೋಟಾರ್ ಅಪಘಾತಗಳಲ್ಲಿ ಸರ್ಕಾರದಿಂದ ಪರಿಹಾರ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಸತ್ತವರ ಅವಲಂಬಿಗಳು ಮತ್ತು ಗಾಯಗೊಂಡವರು ಈಗಾಗಲೇ ಸ್ಥಳೀಯ ಕಾನೂನು ನೆರವು ಮಂಡಳಿಯ ಸಹಾಯವನ್ನು ಕೋರಿರುತ್ತಾರೆ. ಅಪಘಾತದಲ್ಲಿ ಗಾಯಪಡಿಸಿ ಯಾರಿಗೂ ಗೊತ್ತಿಲ್ಲದ ಹಾಗೆ ವಾಹನಗಳು ಪರಾರಿ ಆದ ಸಂದರ್ಭಗಳಲ್ಲಿ ಮಾತ್ರ ಸರ್ಕಾರ ಸೊಲೇಶಿಯನ್ಸ್‌ನಿಧಿಯಿಂದ ಪರಿಹಾರ ಕೊಡಬಲ್ಲುದು. ಉಳಿದ ಅಪಘಾತಗಳಲ್ಲಿ ಸಂಬಂಧಪಟ್ಟ ವಿಮೆ ಕಂಪನಿಗಳು ಪರಿಹಾರ ಕೊಡಬೇಕಾಗುತ್ತದೆ.

೧೯. ಮಡಿಕೇರಿಯ ಗಾಳಿಬೀಡಿನಲ್ಲಿ ನಿರ್ಮಿಸಿದ್ದ ಮಕ್ಕಳ ರೈಲು ಮೂರು ವರ್ಷಗಳಿಂದ ಕೆಟ್ಟು ನಿಂತಿರುವುದು.

ಶ್ರೀ ಡಿ. ಎ. ಚಿಣ್ಣಪ್ಪ (ಮಡಿಕೇರಿ).—೧೯೮೨ರಲ್ಲಿ ಮಡಿಕೇರಿಯ ಗಾಳಿಬೀಡಿನಲ್ಲಿ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಿಂದ ನಿರ್ಮಿಸಿದ್ದ ಮಕ್ಕಳ ರೈಲು ಈಗ್ಗೆ ಸುಮಾರು ೩ ವರ್ಷಗಳಿಂದ ಕೆಟ್ಟು ನಿಂತು ರಿಪೇರಿ ಮಾಡಿದ್ದಾಗ್ಯೂ ಯಾವ ಪ್ರಯೋಜನಕ್ಕೂ ಬಾರದೆ ೬ ಲಕ್ಷ ರೂಪಾಯಿಗಳನ್ನು ವ್ಯರ್ಥವಾಗಿ ವೆಚ್ಚ ಮಾಡಿದಂತಾಗಿದೆ. ಅಲ್ಲದೆ ಈ ಸ್ಥಳ ಮಡಿಕೇರಿಯಿಂದ ಸುಮಾರು ೩ ಕಿಲೋ ಮೀಟರ್ ದೂರದಲ್ಲಿರುವುದರಿಂದ ಬಹಳಷ್ಟು ಮಂದಿ ಶಾಲಾ ಮಕ್ಕಳು, ಇತರೆ ಮಕ್ಕಳು ಹಾಗೂ ವಯಸ್ಕರು ವಿಹಾರಕ್ಕಾಗಿ ಅಲ್ಲಿಗೆ ಹೋಗಿ ನಿರಾಶರಾಗಿ ಹಿಂದಿರುಗಿ ಬರುತ್ತಿದ್ದಾರೆ. ಇದರ ಉಪಯೋಗವನ್ನು ಪಡೆಯದೆ ಮಕ್ಕಳಂತೂ ಬಹಳ ಮನ ನೊಂದುಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಮಕ್ಕಳ ರೈಲನ್ನು ಕೂಡಲೇ ರಿಪೇರಿ ಮಾಡಿಸಿ ಮಕ್ಕಳ ಹಾಗೂ ಜನರ ವಿಹಾರಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ಮತ್ತು ಆ ಸ್ಥಳಕ್ಕೆ ಹೋಗಲು ಸಂಜೆ ೪ ಗಂಟೆಯಿಂದ ೬ ಗಂಟೆಯವರೆಗೆ ಈ ಹಿಂದೆ ಓಡಿಸುತ್ತಿದ್ದಂತೆಯೇ ಸರಕಾರಿ ಬಸ್ಸನ್ನು ಓಡಿಸಬೇಕೆಂದು ಈ ವ್ಯವಸ್ಥೆಯನ್ನು ಕೂಡಲೇ ಕೈಕೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಬಾಲಭವನದ ಅಧಿಕಾರಿಗಳನ್ನು ಕರೆಯಿಸಿ ಆದಷ್ಟು ಬೇಗ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೨೦. ಸಾಲಿಗ್ರಾಮದ ಪುರಸಭೆ ವ್ಯಾಪ್ತಿಯಿಂದ ಬೆಂಗಳೂರಿಗೆ ಸಂವಿಹಾರಿ ಬಸ್ಸಿನ ಸೌಕರ್ಯವನ್ನು ಒದಗಿಸುವುದು.

ಶ್ರೀ ಬಸವರಾಜ್ (ಬ್ರಹ್ಮಾವರ).—ಉಡುಪಿ ತಾಲ್ಲೂಕಿನಲ್ಲಿರುವ ಸಾಲಿಗ್ರಾಮವು ಒಂದು ಪುರ ಸಭೆಯಾಗಿದ್ದು ಉಡುಪಿ ಕುಂದಾಪುರ ಪಟ್ಟಣಗಳ ಮಧ್ಯೆಯಿರುವ ಪ್ರದೇಶವಾಗಿರುತ್ತದೆ. ಇಲ್ಲಿಂದ ಉಡುಪಿ ಸುಮಾರು ೨೫ ಕಿಲೋಮೀಟರ್ ಹಾಗೂ ಕುಂದಾಪುರಕ್ಕೆ ೨೦ ಕಿಲೋಮೀಟರ್ ದೂರದಲ್ಲಿದೆ. ಸಾಲಿಗ್ರಾಮ ಪುರಸಭೆ ವ್ಯಾಪ್ತಿ ಹಾಗೂ ಆಸುಪಾಸಿನ ಗ್ರಾಮಗಳಿಂದ ಬೆಂಗಳೂರಿಗೆ ದಿನಂಪ್ರತಿ ಸಾಕಷ್ಟು ಸಂಖ್ಯೆಯ ಪ್ರಯಾಣಿಕರಿದ್ದು ಅವರಿಗೆ ಸರಿಯಾದ ಬಸ್ಸಿನ ಸೌಕರ್ಯ ಇರುವುದಿಲ್ಲ. ಅಲ್ಲಿಯ ಜನರು ಈ ವಿಷಯವಾಗಿ ಸಾರಿಗೆ ಸಚಿವರಿಗೆ ಬಸ್ಸಿನ ಸೌಕರ್ಯಕ್ಕಾಗಿ ಮನವಿಯನ್ನು ಸಲ್ಲಿಸಿರುತ್ತಾರೆ. ನಾನು ಕೂಡ ಹಲವಾರು ಬಾರಿ ಸಚಿವರ ಗಮನಕ್ಕೆ ಈ ವಿಷಯವನ್ನು ತಂದಿರುತ್ತೇನೆ. ಕಳೆದ ಅಧಿವೇಶನದಲ್ಲಿ ಸಚಿವರು ಸಧ್ಯದಲ್ಲೆ ಸಾಲಿಗ್ರಾಮದಿಂದ ಬೆಂಗಳೂರಿಗೆ ಪ್ರಯಾಣಿಸುವ ಬಸ್ಸಿನ ಸೌಕರ್ಯವನ್ನು ನೀಡುವುದಾಗಿ ಭರವಸೆ ನೀಡಿದ್ದರೂ ಆ ಭರವಸೆ ಈವರೆಗೆ ಕಾರ್ಯಗತ ಆಗಿರುವುದಿಲ್ಲ. ಆದುದರಿಂದ ಸಾಲಿಗ್ರಾಮಕ್ಕೆ ಕೂಡಲೇ ಒಂದು ಸಂವಿಹಾರಿ ಬಸ್ಸನ್ನು ಒದಗಿಸಿ ಕೊಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು).—ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪೃಥ್ವಿ ಹಂತದಲ್ಲಿ ಬೆಂಗಳೂರಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಿಂದ ಸಂವಿಹಾರಿ ಸಾರಿಗೆ ಸಂಪರ್ಕವನ್ನು